# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, 2ನೇ ಮಹಡಿ, ಪಿ.ಯು. ಬಿಲ್ಡಿಂಗ್, ಬಿ.ಬಿ.ಎಂ.ಪಿ. ಮಯೋಹಾಲ್, ಎಂ.ಜಿ. ರಸ್ತೆ, ಬೆಂಗಳೂರು.

ಸಂಖ್ಯೆ: ಸಹಾ/ಶಾನ/ಪಿ.ಆರ್/115/20-21 ದಿನಾಂಕ: 07-12-2020

## -: ಸಭೆಯ ನಡಾವಳಿಗಳು :-

**ವಾರ್ಡ್-111 ಶಾಂತಲಾನಗರ ಸಮಿತಿ ಸಭೆ ದಿನಾಂಕ: 07-12-2020ರ ನಡಾವಳಿಗಳು**

ದಿನಾಂಕ: 07-12-2020 ರಂದು ಸಂಜೆ: 4:00 ಗಂಟೆಗೆ ವಾರ್ಡ್-111 ಶಾಂತಲನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ಕೆಸೋಟಿ ಸಭಾಂಗಣ, 2ನೇ ಮಹಡಿ, ಪಿ.ಯು. ಬಿಲ್ಡಿಂಗ್, ಮಯೋಹಾಲ್, ಎಂ.ಜಿ. ರಸ್ತೆ ಇಲ್ಲಿ ನಡೆಸಲಾಯಿತು. ಅಧ್ಯಕ್ಷರು ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದ್ಯಸರುಗಳನ್ನು ಹಾಗೂ ವಿವಿಧ ಇಲಾಖೆಯ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ, ಸದಸ್ಯ ಕಾರ್ಯದರ್ಶಿಯವರಿಗೆ ಈ ಹಿಂದಿನ ಸಭೆಯ ಅನುಸರಣಾವರದಿಯನ್ನು ಮಂಡಿಸಲು ಸೂಚಿಸಿದರು. ಅದರಂತೆ ಸದಸ್ಯ ಕಾರ್ಯದರ್ಶಿಗಳು ಅನುಸರಣಾವರದಿಯನ್ನು ಈ ಕೆಳಕಂಡಂತೆ ಮಂಡಿಸಿದರು:

1) ಈ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾದ ಈ ಕೆಳಕಂಡ ವಿಷಯಗಳ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು ಕೆಲಸಗಳು ಪೂರ್ಣಗೊಂಡಿರುತ್ತವೆ ಮತ್ತು ಈ ಕೆಳಕಂಡ ಕೆಲಸಗಳನ್ನು ಮುಂದಿನ ಸಭೆಯೊಳಗಾಗಿ ಮಾಡಿ ಅನುಸರಣಾ ವರದಿ ನೀಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.

- ಔಷಧಿ ಸಿಂಪಡಣೆ ಕಾರ್ಯ, ಪಾಟ್‌ಹೋಲ್‌ಗಳನ್ನು ಮುಚ್ಚಿಸುವುದು ಹಾಗೂ ಬೋರ್‌ವೆಲ್‌ನ್ನು ಮುಚ್ಚಿಸುವ ಕೆಲಸವು ವಾತಾವರಣ ಹಾಗೂ ಮಳೆಯಿಂದಾಗಿ ಕ್ರಮವಹಿಸಿಲಾಗದ ಕಾರಣ ಮುಂದಿನ ಸಭೆಯಲ್ಲಿ ಅನುಸರಣಾ ವರದಿ ಸಲ್ಲಿಸಲಾಗುವುದು.
- ರಿಚ್‌ಮಂಡ್ ಉದ್ಯಾನವನದಲ್ಲಿ ಬೀದಿ ದೀಪಗಳ ದುರಸ್ಥಿ ಇದ್ದು ಎಲ್ಲಾ ರಸ್ತೆಗಳಲ್ಲಿನ ಬೀದಿ ದೀಪಗಳ ದೂರುಗಳನ್ನು ಪರಿಹರಿಸುವುದರ ಜೊತೆಗೆ ಸರ್ವೆ ಮಾಡಿ ಬೀದಿ ದೀಪಗಳ ವರದಿ ನೀಡಲು ಸಂಬಂಧಿತ ಅಧಿಕಾರಿಗೆ ತಿಳಿಸಲಾಗಿದೆ.
- ಶ್ರೀಮತಿ ಮೀನಾಕ್ಷಿರವರು ವಿಕ್ಟೋರಿಯಾ ಬಡಾವಣೆಯಲ್ಲಿ ಸ್ಮಾರ್ಟ್ ವಾಟರ್ ಡ್ರೇನ್‌ನಲ್ಲಿ ಬಿದ್ದಿರುವ ಹೂಳನ್ನು ತೆಗೆಯಬೇಕೆಂದು ಕೋರಿದ್ದರು ಅದರಂತೆ ಕಾರ್ಯ ಪ್ರಗತಿಯಲ್ಲಿರುತ್ತದೆ ಸಂಬಂಧಿತ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿರುತ್ತಾರೆ ಮುಂದಿನ ಸಭೆಯಲ್ಲಿ ಅನುಸರಣಾ ವರದಿಯನ್ನು ಲಿಖಿತ ರೂಪದಲ್ಲಿ ಸಲ್ಲಿಸಲಾಗುವುದು.
- ಬೀದಿ ದೀಪಗಳ ನಿರ್ವಹಣೆ, ಪೆದ್ದಮ್ಮ ದೇವಸ್ಥಾನದ ಬಳಿ ಇರುವ ಮಕ್ಕಳ ಉದ್ಯಾನವನವು ಅನುಪಯುಕ್ತವಾಗಿದ್ದು ತಕ್ಷಣ ಅದನ್ನು ಸರಿಪಡಿಸಲು ಅಥವಾ ಸಂಪೂರ್ಣವಾಗಿ ಮುಚ್ಚಲು ತಿಳಿಸಲಾಗಿ ಮುಂದಿನ ವಾರದಲ್ಲಿ ನೋಡಲ್ ಅಧಿಕಾರಿ ಹಾಗೂ ತೋಟಗಾರಿಕೆ ಅಧಿಕಾರಿ ಜಂಟಿ ಸ್ಥಳ ಪರಿಶೀಲನೆ ಮಾಡಲಾಗುವುದೆಂದು ತಿಳಿಸಿದರು.
- ಪೌರ ಕಾರ್ಮಿಕರ ವಿವರಣೆ ಪಡೆಯುವುದು ಹಾಗೂ ವಾರ್ಡಿನ ಎಲ್ಲಾ ಕಡೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ರಕ್ಷಣಾ ಕವಚಗಳನ್ನು ಧರಿಸಲು ಸೂಚನೆ ನೀಡಲು ಹಾಗೂ ಸಂಬಂಧಿತ ಅಧಿಕಾರಿಗಳು ಕ್ರಮವಹಿಸಲು ತಿಳಿಸಲಾಯಿತು.

**ಶಾಂತಿನಗರ ಕ್ಷೇತ್ರದ ಮಾನ್ಯ ಶಾಸಕರಾದ ಎನ್.ಎ ಹ್ಯಾರೀಸ್ ರವರು ಸಭೆಯಲ್ಲಿ ಪಾಲ್ಗೊಂಡು ಸಲಹೆ, ಸೂಚನೆ, ಹಾಗೂ ಮಾರ್ಗದರ್ಶನ ನೀಡಿದರು.**

**ಮು.ತಿ.ನೋ.**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ಸದಸ್ಯರುಗಳು:**

1) ಶ್ರೀ ಜಿ. ಶ್ರೀನಿವಾಸ್, ನೋಡಲ್ ಅಧಿಕಾರಿ ವಾರ್ಡ್-111 ಹಾಗೂ ಆರೋಗ್ಯ ವೈದ್ಯಾಧಿಕಾರಿಗಳು.
2) ಶ್ರೀ ಅಪ್ಪುರಾಜ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಶಾಂತಿನಗರ
3) ಶ್ರೀ ಶ್ರೀನಿವಾಸ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ.
4) ಶ್ರೀ ರೇಣುಕಾ ಎಸ್. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಬಿ.ಎಂ.ಪಿ.
5) ಶ್ರೀ ಶ್ರೀನಿವಾಸ್ ಕೆ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
6) ಶ್ರೀ ಅಶ್ವಿನಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಅಶೋಕ್ ನಗರ (ಕಾ & ಸು)
7) ಶ್ರೀ ಹೆಚ್.ಎಸ್. ಬಸವರಾಜ್.ಸಹಾಯಕ ಕಂದಾಯ ಅಧಿಕಾರಿಗಳು.
8) ಶ್ರೀ ಸಂತೋಷ್ ರಾಜ್ ಎಂ. ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-111 ಶಾಂತಲಾನಗರ.
9) ಶ್ರೀ ವಿದ್ಯಾ ಶ್ರೀ ಕಿರಿಯ ಆರೋಗ್ಯ ಸಹಾಯಕರು
10) ಶ್ರೀ ಯಾಸ್ಮೀನ್ ತಾಜ್ ಕಿರಿಯ ಆರೋಗ್ಯ ಸಹಾಯಕರು
11) ಶ್ರೀಮತಿ ನೇತ್ರಾವತಿ ಹೆಚ್. ಆರ್. ವೆಲ್‌ಫೇರ್ ಸೆಕ್ಷನ್.
12) ಶ್ರೀ ಮೋಸೆಸ್ ಸದಸ್ಯರು ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್.
13) ಶ್ರೀಮತಿ ಪರಿಮಳಾ, ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್.
14) ಶ್ರೀ ಎಂ. ತ್ಯಾಗ್‌ರಾಜನ್ ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್.
15) ಶ್ರೀ ಹರ್ಷ. ಎಸ್ ವಾರ್ಡ್-111 ಶಾಂತಲಾನಗರ ವಾರ್ಡ್ ಕಮಿಟಿ ಕಾರ್ಯದರ್ಶಿ ಮತ್ತು ಕಿರಿಯ ಅಭಿಯಂತರರು.
16) ಶ್ರೀ ಹಿತ್ಯೆಷ್, ಪಿ ವಾರ್ಡ್ 111 ಶಾಂತಲಾನಗರ ವಾರ್ಡ್ ಸಹಾಯಕ ಅಭಿಯಂತರರು.
17) ಶ್ರೀಮತಿ ಮೀನಾಕ್ಷಿ ಅಶೋಕ್ ನಗರ ಪೋಲಿಸ್ ಸಂಚಾರ ಇಲಾಖೆ
18) ಶ್ರೀ ಸುಂದರ್ ವಾರ್ಡ್ 111 ಶಾಂತಲಾನಗರ
19) ಶ್ರೀ ಮಂಜಪ್ಪ ಸ್ಟ್ರೀಟ್ ಲೈಟ್ ಬಿ.ಬಿ.ಎಂ.ಪಿ.
20) ಶ್ರೀ ದೇವರಾಜ್ ಆರ್. ಎಫ್.ಒ.
21) ಶ್ರೀಮತಿ ಮೀನಾಕ್ಷಿ ವಾರ್ಡ್ – ಕಮಿಟಿ ಸದಸ್ಯರು
22) ಶ್ರೀಮತಿ ಪರಿಮಳ ವಾರ್ಡ್ – ಕಮಿಟಿ ಸದಸ್ಯರು
23) ಶ್ರೀ ಮೋಸೆಸ್ ವಾರ್ಡ್ – ಕಮಿಟಿ ಸದಸ್ಯರು
24) ಶ್ರೀ ಸುಂದರ್ ವಾರ್ಡ್ – ಕಮಿಟಿ ಸದಸ್ಯರು
25) ಶ್ರೀ ಆನಂದ್ ವಾರ್ಡ್ – ಕಮಿಟಿ ಸದಸ್ಯರು
26) ಶ್ರೀ ತ್ಯಾಗರಾಜ್ ವಾರ್ಡ್ – ಕಮಿಟಿ ಸದಸ್ಯರು

ನಂತರ ವಾರ್ಡ್ ಕಮಿಟಿಯ ಅಧ್ಯಕ್ಷರು ಕರ್ನಾಟಕ ಮುನಿಸಿಪಲ್ ಕಾರ್ಪೊರೇಶನ್ ಕಾಯ್ದೆ 1976ರ ಕಲಂ 13(H) ಅಡಿ ವಾರ್ಡ್ ಸಮಿತಿಗಳನ್ನು ರಚಿಸಿ, ಚುನಾಯಿತ ವಾರ್ಡ್ ಸದಸ್ಯರು ಕರ್ನಾಟಕ ಮುನಿಸಿಪಲ್ ಕಾರ್ಪೊರೇಶನ್ ಕಾಯ್ದೆ 1976ರ ನಿಯಮ 70 ರಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಸದರಿ ಚುನಾಯಿತ ಪ್ರತಿನಿಧಿಗಳ ಅಧಿಕಾರ ಅವಧಿಯು ದಿನಾಂಕ: 10-09-2020 ಕ್ಕೆ ಮುಕ್ತಾಯವಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸಲು ಮಾನ್ಯ ಆಯುಕ್ತರು, ಬಿಬಿಎಂಪಿ ರವರು ಕಛೇರಿ ಆದೇಶ ಸಂಖ್ಯೆ:ಬಿ12(5)/ಪಿಆರ್/35/2020-21, ದಿನಾಂಕ: 21-09-2020 ರಂತೆ ವಾರ್ಡ್‌ಗಳಿಗೆ ನೋಡೆಲ್

ಅಧಿಕಾರಿರವರನ್ನು ನೇಮಿಸಿರುತ್ತಾರೆ ಹಾಗೂ 02-11-2020 ರ ಮಾನ್ಯ ಆಯುಕ್ತರ ಆದೇಶದಂತೆ ಪರಿಷ್ಕೃತ ಸಮಿತಿಯನ್ನು ರಚಿಸಲಾಗಿರುತ್ತದೆ.

ವಾರ್ಡ್ ಸಮಿತಿಯು ಪ್ರತಿ ಮಾಹೆಯ 1ನೇ ಹಾಗೂ 3ನೇ ಶನಿವಾರದಂದು ಅಥವಾ ಆ ದಿನದಲ್ಲಿ ಸಾರ್ವಜನಿಕ ರಜೆ ಇದ್ದರೆ ಅದರ ಮುಂದಿನ ದಿನಾಂಕದಂದು ಸಭೆ ನಡೆಸಲಾಗುವುದೆಂದು ಹಾಗೂ ತಿಂಗಳಲ್ಲಿ ಎರಡು ಬಾರಿ ಸಭೆಯನ್ನು ಆಯೋಜಿಸಲು ಸೂಚಿಸಿರುವುದರಿಂದ 1ನೇ ಶನಿವಾರ ಹಾಗೂ 3ನೇ ಶನಿವಾರದಂದು ಸಭೆಯು ನಡೆಯುವಂತೆ ನೋಡಿಕೊಳ್ಳುವುದು, ತುರ್ತು ಪರಿಸ್ಥಿತಿಯಲ್ಲಿ / ರಜಾದಿನಗಳಲ್ಲಿ ಸಭೆಯನ್ನು ಆಯೋಜಿಸಿದರೆ ಸಭೆಯ ದಿನಾಂಕವನ್ನು ಮುಂಚಿತವಾಗಿ ತಿಳಿಸಲಾಗುವುದೆಂದು ಸಭೆಗೆ ತಿಳಿಸಿ, ಸಭೆಯನ್ನು ಮುಂದುವರೆಸಲು ಸೂಚನೆ ನೀಡಿದ ನಂತರ, ಸಭೆಯನ್ನು ಆರಂಭಿಸಲಾಯಿತು.

ಮು.ತಿ.ನೋ.

ಈ ಕೆಳಕಂಡ ವಿಷಯಗಳನ್ನು ಚರ್ಚಿಸಿ ಕೆಳಕಂಡಂತೆ ತೀರ್ಮಾನಿಸಲಾಯಿತು:-

| ಕ್ರಸಂ | ಮಾಹಿತಿ | ಕ್ರಮವಹಿಸಬೇಕಾದ ಅಧಿಕಾರಿಗಳು |
|---|---|---|
| ❖ | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP)** | |
| I | **ಕಾಮಗಾರಿ ಇಲಾಖೆ (Engineering Department)** | |
| | ➤ ಶ್ರೀ ಮೀನಾಕ್ಷಿರವರು ಮಾತನಾಡುತ್ತಾ ಸಿಮೆಂಟ್ ಲೈನ್‌ನಲ್ಲಿ, ವಿಕ್ಟೋರಿಯಾ ಬಡಾವಣೆ ಹಾಗೂ ಪಾಮ್ ಗ್ರೋ ರಸ್ತೆಗಳಲ್ಲಿ ಡಿಸಿಲ್ಟಿಂಗ್ ಕೆಲಸ ಕಾಮಗಾರಿ ಕೈಗೊಳ್ಳಬೇಕಾಗಿ ತಿಳಿಸಿದರು.<br>➤ ಶ್ರೀ ತ್ಯಾಗರಾಜ್ ರವರು ಸಭೆಯಲ್ಲಿ ಮಾತನಾಡುತ್ತಾ 2ನೇ ಅಡ್ಡರಸ್ತೆ, ಆಂಗ್ಲೋ ಇಂಡಿಯನ್ ಲೇಔಟ್‌ನಲ್ಲಿ ಶೋಲ್ಡರ್ ಡ್ರೈನ್ ಒಪನ್ ಮಾಡದೆ ಮಳೆ ನೀರು ನಿಂತುಕೊಂಡು ತೊಂದರೆಯಾಗುತ್ತಿದೆಯೆಂದು ತಿಳಿಸಿರುತ್ತಾರೆ.<br>➤ ಶ್ರೀ ತ್ಯಾಗರಾಜ್ ರವರು ಆಂಡೇನ್ ರಸ್ತೆಯಲ್ಲಿರುವ ಪಾಟ್‌ಹೋಲ್‌ಗಳನ್ನು ಮುಚ್ಚಿಸಬೇಕೆಂದು ತಿಳಿಸಿದರು.<br>➤ ಶ್ರೀ ಮೋಸೆಸ್ ರವರು ಸಿಮೆಂಟ್ ಲೇನ್ ಬದಿಯಲ್ಲಿ ಡೆಬ್ರಿಸ್‌ನ್ನು ತೆಗೆಸಬೇಕೆಂದು ಕೋರಿದರು. | ಸಹಾಯಕ ಅಭಿಯಂತರರು / ಸಹಾಯಕ ಕಾರ್ಯಪಾಲಕ ಅಭಿಯಂತರರು (ಕಾಮಗಾರಿ ಇಲಾಖೆ) |
| II | **ಕಂದಾಯ ಇಲಾಖೆ: (Revenue Department)** | |
| | ➤ ಶಾಸಕರು ಮಾತನಾಡುತ್ತಾ ಅಶೋಕನಗರ 6ನೇ ಅಡ್ಡರಸ್ತೆ ಬಳಿ ಅನಧಿಕೃತವಾಗಿ ನಿರ್ಮಾಣವಾಗಿರುವ ಡಯಾಲಿಸಿಸ್ ಸೆಂಟರ್ ಕಟ್ಟಡದ ಸಂಬಂಧ ಪಟ್ಟ ದಾಖಲಾತಿಗಳನ್ನು ಒದಗಿಸಲು ಸೂಚಿಸಿದರು. | ARO<br>ಹೆಚ್.ಎನ್. ಬಸವರಾಜು |
| III | **ಆರೋಗ್ಯ ಇಲಾಖೆ (Health Department)** | |
| | ➤ ತ್ಯಾಗರಾಜ್‌ರವರು ಮಾತನಾಡುತ್ತಾ ಎಲ್ಲಾ ಸಾರ್ವಜನಿಕ ರಸ್ತೆಗಳಲ್ಲಿ ಕೋವಿಡ್-19 ಸೋಂಕು ತಡೆಗಟ್ಟಲು ಔಷದಿ ಸಿಂಪಡಣೆ ಮನಃ ಕೈಗೆತ್ತಿಕೊಳ್ಳಬೇಕೆಂದು ಕೋರಿದರು. | ಹಿರಿಯ ಆರೋಗ್ಯ ಪರಿವೀಕ್ಷಕರು |
| IV | **ಬೀದಿ ದೀಪಗಳ ನಿರ್ವಹಣೆ (Street lights)** | |
| | ➤ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರು ರಿಚ್ ಮಂಡ್ ಉದ್ಯಾನವನದಲ್ಲಿ ದೀಪಗಳ ದುರಸ್ಥಿ ಕಾರ್ಯವನ್ನು ತಕ್ಷಣ ಮಾಡಬೇಕೆಂದು ತಿಳಿಸಲಾಗಿ ಅದನ್ನು ಅನುಸರಿಸಲು ತಿಳಿಸಿದರು.<br>➤ ಮೋಸೆಸ್ ರವರು ಮಾತನಾಡುತ್ತಾ ಬ್ರಿಗೇಡ್ ರಸ್ತೆ ಹಾಗೂ ಆಂಡೇನ್ ರಸ್ತೆಯಲ್ಲಿ ಬೀದಿ ದೀಪಗಳ ವ್ಯವಸ್ಥೆಯು ಸರಿಯಿಲ್ಲದ ಕಾರಣ ಸ್ವಯಂಚಾಲಿತ ಸ್ವಿಚ್ ಬೋರ್ಡ್‌ಗಳನ್ನು ಅಳವಡಿಸಲು ಕೋರಿದರು ಹಾಗೂ ಆಂಡೇನ್ ರಸ್ತೆಯಲ್ಲಿ ಸಿ.ಸಿ.ಟಿ.ವಿ ಯನ್ನು ಅಳವಡಿಸಲು ಕೋರಿದರು.<br>• ಅಧ್ಯಕ್ಷರು ವಾರ್ಡಿನ ಎಲ್ಲಾ ರಸ್ತೆಗಳಲ್ಲಿನ ಬೀದಿ ದೀಪಗಳ ದೂರುಗಳನ್ನು ಪರಿಹರಿಸುವುದರ ಜೊತೆಗೆ ಸರ್ವೆ ಮಾಡಿ ಬೀದಿ ದೀಪಗಳ (ಎಲ್.ಇ.ಡಿ ಮತ್ತು ಸೈಟ್ರೋಜನ್) ವರದಿ ನೀಡಲು ತಿಳಿಸಲಾಯಿತು. | AE/AEE (BESCOM) & Street Light Contractor |
| V | **BBMP (MPED) DEPARTMENT** | |
| | ➤ ಶಾಸಕರು ಮಾತನಾಡುತ್ತಾ ಅಶೋಕನಗರ 6ನೇ ಅಡ್ಡರಸ್ತೆ ಬಳಿ ಅನಧಿಕೃತವಾಗಿ ನಿರ್ಮಾಣವಾಗಿರುವ ಡಯಾಲಿಸಿಸ್ ಸೆಂಟರ್ ಕಟ್ಟಡಕ್ಕೆ ನೋಟೀಸ್ ಜಾರಿಮಾಡಲು ಸೂಚಿಸಿದರು. | AEE<br>ಸುರೇಶ್ |

ಮ.ತಿ.ನೋ.

| | | |
|---|---|---|
| VI | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (BWSSB) | |
| | ➡ ಶ್ರೀ ಸುರೇಂದ್ರ ಸದಸ್ಯರು ಮಾತನಾಡುತ್ತಾ ಟೇಟ್‌ಲೇನ್ ಬಳಿ ಅನುಪಯೋಗ ಬೋರ್ ವೆಲ್ ಇದ್ದು ಅದನ್ನು ತೆಗೆಸಲು ತಿಳಿಸಿದರು ಹಾಗೂ ಅನುಪಯುಕ್ತ ಬೋರ್‌ವೆಲ್‌ಗಳ ವಿದ್ಯುತ್ ಸಂಪರ್ಕವನ್ನು ತೆರವುಗೊಳಿಸಲು ಕೋರಿದರು.<br>➡ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಮರಿಯಾ ಎಂಬುವವರು ಮಾತನಾಡುತ್ತಾ ನೀರು ಸರಬರಾಜಿನ ತೊಂದರೆಯಾಗುತ್ತಿದ್ದು ಮುಂದಿನ ಸಭೆಯಲ್ಲಿ ಶ್ರೀ ರೂಪ ಎಂಬುವವರೊಡನೆ ಚರ್ಚಿಸಿ ಸಮಸ್ಯೆಗೆ ಪರಿಹಾರ ನೀಡಲು ಸೂಚಿಸಿದರು ಹಾಗೂ ನೋಡಲ್ ಅಧಿಕಾರಿಯವರು ಸ್ಥಳ ಪರಿಶೀಲನೆ ಮಾಡುವುದಾಗಿ ತಿಳಿಸಿದರು.<br>• ಎಂ.ಜಿ. ರಸ್ತೆಯಲ್ಲಿ ಅಜಂತ ಹೋಟೆಲ್ ಬಳಿ ಮರವು ನಶಿಸಿ ಹೋಗಿದ್ದು ಅದರ ಕೆಳಗೆ BWSSB ಪೈಪ್ ಲೈನ್ ಹಾನಿಯಾಗಿರುವುದು ಕಂಡು ಬಂದಿದ್ದು ಅದನ್ನು ಅತಿ ಜರೂರಾಗಿ ಸಂಬಂಧಿತ ಕ್ರಮವಹಿಸಲು ತಿಳಿಸಿಲಾಯಿತು.<br>• ಕ್ರಮವಹಿಸಿ ಅನುಸರಣಾ ವರದಿ ನೀಡಲು ತಿಳಿಸಲಾಯಿತು. | **AE/AEE-BWSSB** |
| VII | ಬೆಸ್ಕಾಂ (BESCOM) | |
| | ➡ ಎಂ.ಜಿ.ರಸ್ತೆ, ಮದರ್ ತೆರೆಸಾ ರಸ್ತೆ ಹಾಗೂ ಇನ್ನಿತರೆ ರಸ್ತೆಗಳಲ್ಲಿ ರಸ್ತೆಗಳನ್ನು ಅಗೆದಿದ್ದು ರಸ್ತೆಯನ್ನು ಪೂರ್ವ ಸ್ಥಿತಿಗೆ ತರಲು ಸೂಚಿಸಿರುತ್ತಾರೆ | **AE/AEE-BESCOM** |
| VIII | ತೋಟಗಾರಿಕೆ ಇಲಾಖೆ (Horticulture Department) | |
| | ➡ ಎಂ.ಜಿ. ರಸ್ತೆಯಲ್ಲಿ ಅಜಂತ ಹೋಟೆಲ್ ಬಳಿ ಮರವು ನಶಿಸಿ ಹೋಗಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಕಾರಣ ಅತಿ ಜರೂರಾಗಿ ಸಂಬಂಧಿತ ಕ್ರಮವಹಿಸಲು ತಿಳಿಸಿಲಾಯಿತು.<br>• ಸಂಬಂಧ ಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಶಿಫಾರಸ್ಸಿನೊಂದಿಗೆ ವರದಿ ನೀಡಲು ತಿಳಸಲಾಯಿತು. | **ಸೂಪರ್ ಟೆಂಡೆಂಟ್ ತೋಟಗಾರಿಕೆ ಇಲಾಖೆ ಶಾಂತಿನಗರ ವಿಭಾಗ** |
| IX | ಪೋಲಿಸ್ ಇಲಾಖೆ (ಸಂಚಾರ ಮತ್ತು ಕಾ&ಸು) (Traffic Police, Law & Order) | |
| | ➡ ಶ್ರೀ ಲಿನ್‌ಡೆನ್ ಸ್ಟ್ರೀಟ್ ನಲ್ಲಿ ಒಂದು ಟೀ ಶಾಪ್ ಇದ್ದು ಅಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದೆಯೆಂದು ಹಾಗೂ ಸಿ.ಸಿ.ಟಿ.ವಿ ಗಳನ್ನು ಅಳವಡಿಸುವ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದರು. | **CI / PSI (L & O)** |

**ಕಾರ್ಯದರ್ಶಿ ಮತ್ತು**
**ಕಿರಿಯ ಅಭಿಯಂತರರು,**
**ಶಾಂತಲಾನಗರ**

**ನೋಡಲ್ ಅಧಿಕಾರಿ ವಾರ್ಡ್-111 ಹಾಗೂ**
**ಆರೋಗ್ಯ ವೈದ್ಯಾಧಿಕಾರಿಗಳ ಕಛೇರಿ,**
**ವಾರ್ಡ್-111 ಶಾಂತಲಾನಗರ**

**ಪ್ರತಿಗಳನ್ನು:-**

1) ಮಾನ್ಯ ಆಯುಕ್ತರು, ಆಪ್ತ ಸಹಾಯಕರಿಗೆ ಕಳುಹಿಸುತ್ತಾ, ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2) ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ಪೂರ್ವ ವಲಯವರವ ಅವಗಾಹನೆಗಾಗಿ ಸಲ್ಲಿಸಿದೆ.
4) ವಲಯ ಆಯುಕ್ತರು, ಪೂರ್ವ ವಲಯವರವ ಅವಗಾಹನೆಗಾಗಿ ಸಲ್ಲಿಸಿದೆ.
5) ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ಅವಗಾಹನೆಗೆ ಸಲ್ಲಿಸಿದೆ.
6) ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಹಾಗೂ ಎಲ್ಲಾ ಸಮಿತಿ ಸದಸ್ಯರಿಗೆ ಸಲ್ಲಿಸಿದೆ.
7) ಕಛೇರಿಯ ಕಡತಕ್ಕೆ .